# ‘ಅಲ್ಕಾಟ್ರಾಝ್’ ಮರಣಮೃದಂಗ





ಭಾರತದಲ್ಲಿನ ಅಂಡಮಾನ್‌ನಂತೆ ಅಮೆರಿಕದಲ್ಲಿ ಅಲ್ಕಾಟ್ರಾಝ್. ಇಲ್ಲಿನ ನರಕಸದೃಶ ಜೈಲಿನ ಕಲ್ಪನೆಯೇ ಅಪರಾಧಿಗಳಲ್ಲಿ ನಡುಕ ಹುಟ್ಟಿಸುವಂತಿತ್ತು. ಈಗ ಅಲ್ಕಾಟ್ರಾಝ್ ಪ್ರವಾಸಿ ತಾಣವಾಗಿ ಜನಪ್ರಿಯತೆ ಗಳಿಸುತ್ತಿದೆ.

■ **ಸಂತೋಷ್ ರಾವ್ ಪೆರ್ಮುಡ**

ಈ ಶತಮಾನದ ಜಗತ್ತಿನ ದೊಡ್ಡಣ್ಣನೆಂದೇ ಪ್ರಸಿದ್ಧಿ ಪಡೆದಿರುವ ಅಮೆರಿಕ 1930ರ ದಶಕದಲ್ಲಿ ದರೋಡೆಕೋರರ ಹಾವಳಿಯಿಂದಾಗಿ ತತ್ತರಿಸಿ ಹೋಗಿತ್ತೆಂದರೆ ನಂಬುತ್ತೀರಾ? ನಂಬಲೇಬೇಕು, ಅಮೆರಿಕ ಸರ್ಕಾರ ದರೋಡೆಕೋರರನ್ನು ನಿಯಂತ್ರಿಸಲಾರದೆ ಚಿಂತಾಕ್ರಾಂತವಾಗಿದ್ದ ಕಾಲವದು. ಹೇಗಾದರೂ ದರೋಡೆಕೋರರನ್ನು ಮಟ್ಟ ಹಾಕಲೇಬೇಕೆಂದು ಪ್ರಯತ್ನಿಸುತ್ತಿದ್ದ ಸರ್ಕಾರ, ದುರ್ಭೇದ್ಯವಾದ ಜೈಲೊಂದನ್ನು ನಿರ್ಮಿಸಿ ದರೋಡೆಕೋರರನ್ನು ಅದರಲ್ಲಿ ಕೂಡಿಹಾಕಿ ನಿಯಂತ್ರಿಸುವ ನಿರ್ಧಾರವನ್ನು ಕೈಗೊಂಡಿತ್ತು. ಅದಕ್ಕಾಗಿ ಅದು ಆಯ್ಕೆ ಮಾಡಿಕೊಂಡಿದ್ದು ಪ್ರಪಂಚದಲ್ಲೇ ಅತ್ಯಂತ ವಿಶಿಷ್ಟವಾದ ಅಲ್ಕಾಟ್ರಾಝ್ ನಡುಗಡ್ಡೆ (ದ್ವೀಪ) ಪ್ರದೇಶವನ್ನು.

ಕೈದಿಗಳ ಪಾಲಿಗೆ ಭಯಾನಕವಾದ ಹಾಗೂ ಮರಣವನ್ನೇ ಕೊಡುಗೆಯಾಗಿ ನೀಡುವಂತಹ ಜೈಲೊಂದನ್ನು ನಿರ್ಮಾಣ ಮಾಡಿ, ಆ ಜೈಲಿಗೆ ದ್ವೀಪದ ಹೆಸರನ್ನೇ ಇಟ್ಟು ‘ಅಲ್ಕಾಟ್ರಾಝ್ ಜೈಲು’ ಎಂದು ಮರುನಾಮಕರಣ ಮಾಡಲಾಯಿತು.

## ಏನಿದು ಅಲ್ಕಾಟ್ರಾಝ್?

ಅಮೆರಿಕದ ಪ್ರಮುಖ ನಗರ ಸ್ಯಾನ್‌ಫ್ರಾನ್ಸಿಸ್ಕೋದಿಂದ ಸುಮಾರು 5 ಕಿ.ಮೀ. ದೂರದ ಸಮುದ್ರ ಮಧ್ಯದ ಸುಮಾರು 22 ಎಕರೆ ಭೂಪ್ರದೇಶವನ್ನು ಹೊಂದಿದ ದ್ವೀಪವೇ ಇಂದು ಜಗತ್ತೇ ಗುರುತಿಸಿರುವ ಅಲ್ಕಾಟ್ರಾಝ್. ಇತಿಹಾಸದ ಪುಟಗಳು ಹೇಳುವ ಪ್ರಕಾರ ಈ ದ್ವೀಪದ ಮೂಲ ಒಡೆಯ ‘ಜ್ಯೂಲಿಯನ್ ವೋರ್ಕ್ಸ್‌ಮ್ಯಾನ್’. ಈತ ಇದನ್ನು 1846ರಲ್ಲಿ ಮೆಕ್ಸಿಕೋದ ಅಂದಿನ ಗವರ್ನರ್ ‘ಪಿಯೋ ಫಿಕೋ’ ಅವರಿಗೆ ನೀಡಿದನೆಂದು ಹೇಳಲಾಗಿದೆ.